

SSLC-PUC ಮಾರ್ಗದರ್ಶಿ

ಬೇರೆ ಅನೌನ್ಸ್ ಆಗಿದೆ, ಎಷ್ಟೊಂದ್ ಓದೋದಿದೆ, ಆನ್‌ಲೈನ್‌ನಲ್ಲಿ ಮಾಡಿದ್ದನ್ನ ರಿವೈಸ್ ಮಾಡ್ತೀರಾ?' ಅಂತ ಕೇಳಿದರು. ಉತ್ತರಿಸಬೇಕೆನ್ನುವಷ್ಟರಲ್ಲಿ ತಾಯಿಯೊಬ್ಬರು, 'ಸರ್, ಆನ್‌ಲೈನ್ ಕ್ಲಾಸ್‌ಗೆ ಅಂತ ಸ್ಮಾರ್ಟ್ ಫೋನ್ ಬೇಕು ಕೊಡಿಸಿದ್ದೆ. ಮೊದಲು ಒಂದು ವಾರ ಮಾತ್ರ ಪಾಠ ಕೇಳ್ತಿದ್ದ, ಆಮೇಲೆ ನೆಟ್‌ವರ್ಕ್ ಪ್ರಾಬ್ಲೆಮ್ಮು, ಸರಿಯಾಗಿ ಕೇಳಿಸ್ತಿಲ್ಲ, ವಾಯ್ಸ್ ಬ್ರೇಕ್ ಆಗ್ತಿದೆ ಅಂತೆಲ್ಲ ಹೇಳಿ ಕ್ಲಾಸ್ ಅಟೆಂಡ್ ಮಾಡೊದನ್ನೇ ನಿಲ್ಲಿಸಿಬಿಟ್ಟ. ಈಗ ಗೇಮ್‌ಗೆ ಅಡಿಕ್ಟ್ ಆಗಿಬಿಟ್ಟಿದ್ದಾನೆ. ಹೇಗಾದರೂ ಮಾಡಿ ಇದನ್ನ ತಡೀರಿ ಸಾರ್' ಎಂದು ಅಲವತ್ತುಕೊಂಡರು. ಅಷ್ಟರಲ್ಲಿ ನಾನು ಬೇರೊಬ್ಬ ಪೋಷಕರನ್ನು ಕರೆದು, 'ಯಾಕ್ರೀ ಫಿಸಿಕಲ್ ಕ್ಲಾಸಸ್ ಶುರುವಾದ್ರೂ ನಿಮ್ಮ ಮಗ ಕಾಲೇಜಿಗೆ ಬರ್ತಿಲ್ಲ' ಅಂದದ್ದಕ್ಕೆ, 'ಏನ್ಮಾಡೋದು ಸಾರ್, ನಮಗೂ ಕಳಿಸಬೇಕು ಅಂತ ಇದೆ. ಆದ್ರೆ ಮೊಬೈಲ್ ನೋಡಿ ನೋಡಿ ಕಣ್ಣುರೀತಿದೆ, ಕಣ್ಣು ಬಿಡಕ್ಕಾಗಲ್ಲ ಅಂತಿದ್ದ. ಅದಕ್ಕೆ ಕಣ್ಣಾಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ, ಡಾಕ್ಟ್ರು ಐ ಡ್ರಾಪ್ಸ್ ಕೊಟ್ಟಿದ್ದಾರೆ, ಸರಿ ಹೋದ್ರೆ ಕಳಿಸ್ತೀನಿ' ಅಂದ್ರು. ಇಷ್ಟೇ ಅಲ್ಲ, ಇನ್ನೊಬ್ಬ ತಾಯಿ, 'ಸರ್ ನಿಮ್ಮ ಹತ್ರ ಸೆಪರೇಟಾಗಿ ಮಾತನಾಡಬೇಕು' ಅಂದರು. 'ಏನಮ್ಮ?' ಎಂದು ಬದಿಗೆ ಕರೆದು ಕೇಳಿದ್ದಕ್ಕೆ, 'ಸರ್, ಕ್ಲಾಸ್‌ಗೆ ಅಂತ ನೀವು ವಾಟ್ಸಪ್ ಗ್ರೂಪ್ ಮಾಡಿದ್ರಲ್ಲ. ಆಗ ನಮ್ಮ ಮಗಳ ನಂಬರ್ ಪತ್ತೆ ಮಾಡ್ಕೊಂಡಿರೋ ಹುಡುಗ ಒಬ್ಬ ಹಗಲು ರಾತ್ರಿ ಎನ್ನದೆ ನಮ್ಮ ಮಗಳಿಗೆ ಮೆಸೇಜ್ ಮಾಡತ್ತಾನೆ, ಯಾಕಪ್ಪ ಅಂತ ಕೇಳಿದ್ರೆ ಸಬ್ಜೆಕ್ಟ್ ಡಿಸ್ಕಸ್ ಮಾಡ್ತಾ ಇದ್ದೆ ಅಂತಾನೆ, ಇಬ್ಬರಿಗೂ ಹೇಳಿ ನನಗಂತೂ ಸಾಕಾಗಿ ಹೋಗಿದೆ ಸರ್, ಹೇಗಾದರು ಮಾಡಿ ಇದನ್ನ ತಡೀರಿ' ಎಂದು ಬೇಡಿಕೊಂಡರು.

## ವಿನ್ನಿಂಗ್ ದ ವಾರ್, ವಿಥೌಟ್ ಫೈಟಿಂಗ್

ಗಣಿತ ಉನ್ನತ ಅಧ್ಯಯನದ 'ಆಪರೇಶನ್ಸ್ ರಿಸರ್ಚ್' ಎಂಬ ವಿಷಯವನ್ನು 'ಆರ್ಟ್ ಆಫ್ ವಿನ್ನಿಂಗ್ ದ ವಾರ್ ವಿಥೌಟ್ ಆಕ್ಚುಅಲಿ ಫೈಟಿಂಗ್ ಇಟ್' ಎನ್ನುತ್ತಾರೆ. ಇದು ಎರಡನೇ ವಿಶ್ವ ಮಹಾಯುದ್ಧದ ಸಂರ್ಭದಲ್ಲಿ ಉದಿಸಿದ ಸಬ್ಜೆಕ್ಟ್ ಎಂದೇ ಇಂದಿಗೂ ಖ್ಯಾತವಾಗಿದೆ. ಆಗ ಯುದ್ಧ ಮಾಡುತ್ತಿದ್ದ ಅಮೆರಿಕ ನೇತೃತ್ವದ ಗುಂಪಿನ ಶಸ್ತ್ರಾಸ್ತ್ರಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾದಾಗ ಇರುವ ಅತ್ಯಲ್ಪ ಯುದ್ಧ ಸಾಮಗ್ರಿ ಬಳಸಿ ಹೇಗೆ ಯುದ್ಧ ಗೆಲ್ಲುವುದು? ಎಂಬ ಪ್ರಶ್ನೆ ಎದುರಾಗಿತ್ತು. ವಿಜ್ಞಾನಿಗಳ ಬಳಿ ಪರಿಹಾರ ಕೇಳಲಾಯಿತು. ಸಹಾಯಕ್ಕೆ ಬಂದ ಗಣಿತಜ್ಞರು



ಕೊರೊನಾ ಸೋಂಕಿನ ಆತಂಕದ ನಡುವೆಯೂ ಕಳೆದ ಜುಲೈನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಬೆಂಗಳೂರಿನ ವಿದ್ಯಾರ್ಥಿನಿಯರ ಸಂಭ್ರಮ
ಫೋಟೊ: ಬಿ.ಕೆ. ಜನಾರ್ದನ್